**ಸಿವಿಲ್ ಮತ್ತು ಜೆಎಮ್ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 101 / 2015**

| | | |
|---|---|---|
| ಸಾಕ್ಷಿಯ ಹೆಸರುಃ | ಶಾಂತಿಬಾಯಿ | ಫ್ರಾ.ಸಾಃ 12 |
| ತಂದೆ/ಗಂಡನ ಹೆಸರುಃ | ಶಂಕರ ಪವಾರ | ಚಾಸಾಃ 17 |
| ವಯಸ್ಸುಃ | 40 ವರ್ಷ | ದಿಃ 26.07.2019 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಬೋರಬಂಡಾ | |

ಸಾಕ್ಷಿಗೆ ಕನ್ನಡ ಅರ್ಥವಾಗುತ್ತಿದ್ದು ಮಾತನಾಡಲು ಬರದ ಕಾರಣ ಶ್ರೀ ವಿ.ಎಂ.ಆರ್ ವಕೀಲರನ್ನು ತೆಲುಗು ಭಾಷೆಯಿಂದ ಕನ್ನಡಕ್ಕೆ ಭಾಷಾಂತರಕಾರರನ್ನಾಗಿ ತೆಗೆದುಕೊಂಡು ಸಾಕ್ಷಿಯು ನೀಡಿದ ಸಾಕ್ಷವನ್ನು ಭಾಷಾಂತರಿಸಿ ತೆಗೆದುಕೊಳ್ಳಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಹಿ.ಸ.ಸ.ಅ.ರಿಂದಃ

ಅಪಘಾತ ಯಾವರೀತಿ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಚಾಸಾ-6 ರಿಂದ ಚಾಸಾ-16, 18 ರಿಂದ 35, ಚಾಸಾ-38 ರಿಂದ 46 ಹಾಗೂ ಚಾಸಾ-50 ರಿಂದ 76 ಇವರ ಪರಿಚಯ ಇರುವುದಿಲ್ಲ. ಆರೋಪಿ ಪರಿಚಯ ಇರುವುದಿಲ್ಲ. ಯಾವ ದಿನಾಂಕದಂದು ಎಲ್ಲಿ ಏನು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನನ್ನನ್ನು ಕರೆಸಿರುವುದಿಲ್ಲ ಯಾವುದೇ ಹೇಳಿಕೆ ಪಡೆದಿರುವುದಿಲ್ಲ.

( ಈ ಹಂತದಲ್ಲಿ ಮಾನ್ಯ ಹಿ.ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಹಿ.ಸ.ಸ.ಅ. ರವರಿಂದಃ**

ದಿಃ 28.06.2014 ರಂದು ಮದ್ಯಾಹ್ನ 12-15 ಗಂಟೆಗೆ ಚಿನ್ನಕಾರ ಗ್ರಾಮದ ಸೀಮಾಂತರದಲ್ಲಿ ಬರುವ ಸಣ್ಣ ಮುಖಪ್ಪ ಇವರ ಹೊಲದ ಹತ್ತಿರ ತಿರುವು ಮತ್ತು ಇಳಿಜಾರು ರಸ್ತೆಯ ಮೇಲೆ ಆರೋಪಿತನು ತನ್ನ ಐಷರ್ ಡಿಸಿಎಂ ವಾಹನ ಸಂಃ ಕೆಎ-19-ಬಿ-2331 ನೇದ್ದರಲ್ಲಿ ನನ್ನನ್ನು ಮತ್ತು ಇನ್ನಿತರ 67 ಜನರನ್ನು ಕೂರಿಸಿಕೊಂಡು ಬೆಟ್ಟದಳ್ಳಿ

ಗ್ರಾಮದಿಂದ ಬೋರಬಂಡಾ ಗ್ರಾಮಕ್ಕೆ ಬರುತ್ತಿರುವಾಗ ವಾಹನವನ್ನು ಅತೀವೇಗ ಮತ್ತು ಅಲಕ್ಷತನದಿಂದ ನಡೆಸಿಕೊಂಡು ಬಂದು ರಸ್ತೆಯ ಬಲಭಾಗದಲ್ಲಿ ಪಲ್ಟಿ ಮಾಡಿದ್ದರಿಂದ ನನಗೆ ಟೊಂಕಕ್ಕೆ ಮತ್ತು ಎರಡೂ ತೊಡೆಗಳಿಗೆ ಒಳಪೆಟ್ಟಾಗಿದ್ದು ಹಾಗೂ ಉಳಿದ ಜನರಿಗೆ ಸಾಧಾ ಮತ್ತು ಭಾರೀ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಈಗ ವಿವರವಾಗಿ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-16 ಎಂದು ಗುರುತಿಸಲಾಯಿತು. ನಿಪಿ-16 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಹಾಗೂ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತನ ತಪ್ಪಿನಿಂದ ಅಪಘಾತ ಸಂಭವಿಸಿದ್ದರೂ ಅವರೊಂದಿಗೆ ರಾಜೀಯಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಂ.ಎಂ.ಈ. ವಕೀಲರಿಂದಃ</u>**

ಪಾಟೀ ಸವಾಲು ಇರುವುದಿಲ್ಲ.

**<u>ಮರುವಿಚಾರಣೆ ಃ</u>** ಇಲ್ಲ

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ